A.—**Sri A. G. RAMACHANDRA RAO** (Minister for Law and Education).—

(*a*) The principles on which "Pracharaks" are selected are that they generally should have deep knowledge in Indian Classics, heritage and culture, wide outlook on human relationship and sufficient experience in effective speaking and singing and not merely academic qualifications.

(*b*) It is a matter of opinion.

ಶ್ರೀ ಎಸ್. ಸಿದ್ದಪ್ಪ.—ಬೇರೆ ಉತ್ತರ ಕೊಟ್ಟಿರುವುದರಿಂದ ಇದರಮೇಲೆ ಉಪಪ್ರಶ್ನೆಗಳನ್ನು ಕೇಳುವುದಿಲ್ಲ.

Literary and Cultural Development Department (Amount Spent).

Q.—628. **Sri K. PRABHAKAR** (Nelamangala—Scheduled Castes).—

Will the Government be pleased to state :—

(*a*) the total expenditure on the Literary and Cultural Development Department (ಸಂಸ್ಕೃತಿ ಪ್ರಸಾರ ಯೋಜನೆಯ ಇಲಾಖೆ) up-to-date;

(*b*) of that, how much is being spent annually on establishments ?

A.—**Sri A. G. RAMACHANDRA RAO** (Minister for Law and Education).—

(*a*) Expenditure incurred as follows :—

Rs. 38,451 during 1953-54.

Rs. 1,33,870-14-0 during 1954-55.

Rs. 3,17,861-14-6 (up to end of February 1956)

(*b*) Rs. 1,524 P.A. on the menial establishment of the Director of Literary and Cultural Development.

ಶ್ರೀ ಕೆ. ಪ್ರಭಾಕರ್.—(ಬ) ಪ್ರಶ್ನೆಗೆ ಉತ್ತರವಾಗಿ "menial establishment of the Director of Literary and Cultural Development" ಎಂದು ಹಾಕಿದ್ದೀರಿ. ಇತರ ಎಲ್ಲಾ chargesಅನ್ನೂ ಬಿಟ್ಟು ಇದು ಒಂದನ್ನು ಮಾತ್ರ expenditure ಎಂದು consider ಮಾಡಿದ್ದೀರಾ ?

*ಶ್ರೀ ಎ. ಜಿ. ರಾಮಚಂದ್ರರಾವ್.—Establishment ಎಂದರೆ Head of the Department ಬಿಟ್ಟು ಬಾಕಿ ಎಲ್ಲಾ ಸೇರುತ್ತದೆ. ಇಲ್ಲಿ ಕೊಟ್ಟಿರುವುದು menial establishmentಗೆ ಖರ್ಚಾಗಿರುವುದು ಮಾತ್ರ.

ಶ್ರೀ ವಿ. ಆರ್. ನಾಯ್ಡು.—ಸಂಸ್ಕೃತಿ ಪ್ರಚಾರ ಪ್ರಾರಂಭವಾದ ಮೇಲೆ ಜನಗಳಲ್ಲಿ ದೈವಭಕ್ತಿ ಹೆಚ್ಚಾಗಿ ಇತ್ತೀಚೆಗೆ ದೇವಾಲಯಗಳಲ್ಲಿ ಸೇವೆ ಮಾಡಿಸತಕ್ಕ ಜನಗಳು ಕಮ್ಮಿ ಆಗುತ್ತಾ ಇರುವುದು ಗೊತ್ತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಅಭಾವ ಏನೂ ಕಾಣಲಿಲ್ಲ.

ಶ್ರೀ ವಿ. ಆರ್. ನಾಯ್ಡು.—ಸಂಸ್ಕೃತಿ ಇಲ್ಲದ ನಾಗರೀಕತೆ, ಪರಿಮಳವಿಲ್ಲದ ಪುಷ್ಪವಿದ್ದಹಾಗೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲೇನೂ ಅನುಮಾನವಿಲ್ಲ. ಮಾನ್ಯ ಸದಸ್ಯರಲ್ಲಿ ದೈವಭಕ್ತಿ ಬಹಳ ಹೆಚ್ಚಾಗಿ ಅದು ಎಲ್ಲೆಲ್ಲೂ ಹರಡುತ್ತಾ ಇದೆ.

Primary Schools in Temples. Admission of Harijan Students.

Q.—98. **Sri C. T. HANUMANTHAIYA** (Pavagada—Scheduled Castes).—

Will the Government be pleased to state :—

(*a*) the number of places in the State where Government Primary Schools are being held in temples;

(*b*) whether it has come to their notice that Harijan boys and girls are not admitted into those schools and taught there;

(*c*) if so, the nature of action taken by them (talukwar and district-war information to be furnished) ?

A.—**Sri A. G. RAMACHANDRA RAO** (Minister for Law and Education).—

(*a*) 861.

(*b*) No.

(*c*) Does not arise in view of reply to clause (*b*) above.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ 861 ಗ್ರಾಮಗಳಲ್ಲಿ ದೇವಸ್ಥಾನದಲ್ಲಿ ಪ್ರೈಮರೀ ಸ್ಕೂಲುಗಳನ್ನು ನಡೆಸುತ್ತಾ ಇದೆ ಎಂದು ಹೇಳಿದ್ದೀರಿ. 'ಆ ಗ್ರಾಮಗಳಲ್ಲೆಲ್ಲಾ ದೇವಸ್ಥಾನಗಳಲ್ಲಿ ಹರಿಜನರ ವಿದ್ಯಾರ್ಥಿಗಳನ್ನು ಸೇರಿಸುತ್ತ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ' ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಈಗ ನಾನು ಒಂದು ಉದಾಹರಣೆ ಹೇಳಬೇಕಾದರೆ, ನೀರಾ ತಾಲ್ಲೂಕು ದ್ಯಾರನಕುಂಟೆಯಲ್ಲಿ ಸೇರಿಸುತ್ತಾ ಇಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ನೋಟ್‌ಮಾಡಿಕೊಂಡು ವಿಚಾರಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಅದೇ ರೀತಿ ಈ 861 ದೇವಸ್ಥಾನಗಳಲ್ಲೂ ಹರಿಜನರನ್ನು ಸೇರಿಸುತ್ತಾ ಇದ್ದಾರೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಕಡೆಯಿಂದಲೂ ಸೇರಿಸುತ್ತಾ ಇಲ್ಲ ಎಂದು ಹೇಳಿ ದೂರು ಬಂದಿಲ್ಲ. ಈಗ ತಾವು ಒಂದು ಸ್ಥಳ ಹೇಳಿದಿರಿ. ಅದೇರೀತಿ ಇತರ ಕಡೆಯೂ ಇದ್ದರೆ ಪರಿಶೀಲನೆಮಾಡಿ ಸರಿಯಾದ ಸೌಕರ್ಯ ಏರ್ಪಾಡು ಮಾಡುತ್ತೇವೆ.